**In the court of 1st Addl. District and Sessions Judge, Davanagere.**

S.C.34/2023

PW- 07
CW- 16
Sworn on 09-01-2024

| | | |
|---|---|---|
| Name Kum. | : | Dr. P.M.Nagaraju |
| Name of Father | : | Late P.M. Mahadevappa |
| Age | : | 46 year |
| Designation | : | Senior Scientific officer, RFSL, Belagavi |
| Residing at | : | Belagavi |

**Main chief examination : Learned Public Prosecutor.**

From November-2011 to June-2021 I worked as Senior Scientific officer RFSL, Davangere.

On 20-06-2016 our office has received five sealed articles relating to Davangere Rural police station in Cr.No.129/16 from Dy.S.P., Rural Sub Division, through PC-46 of Rural police station. Reception section of our office received and registered and was sent to Toxicology section for examination.

I received sealed five articles. On verification the seal found on these articles were intact and tallied with sample seal. The description found on the articles correspond to those that of the present in the invoice.

On opening of the article No.1 for the examination, I found item No.1 stomach and its contents, item No.2 portion of lever, kidney and spleen, item No.3 blood, item No.4 preservative used saturated solution of sodium chloride, item No.5 stomach wash .

All the five articles were subjected to chemical analysis and found presence of Organ phosphorus insecticide in item No.1, 2, 3 and 5. Not detected in item No.4.

All the articles were destroyed after examination as per the instruction of Pollution control board. These samples are Bio-hazards to human. In this regard, I issued report along with sample seal of our laboratory.

Now, I see the report along with sample seal and it is already marked as Ex.P.4, now my signature is marked as Ex.P.4(a).

**Cross examination:** by Sri. RK advocate for accused :

Sri BT advocate for Sri RK advocate prays time. No grounds. Prayer is rejected. Hence cross examination recorded as nil.

**(Typed to my detection in Open Court)**

R, O, I and A C,

I-Addl. District & Sessions Judge,
Davanagere.

Co-ordinator.

Dr.Praveen.Lathor
EGC-Technician
RFSL. Belagavi

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.34/2023

PW- 06

CW- 15

ಪ್ರ. ಬೋ. ದಿನಾಂಕಃ 09-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಅಬಿಜಿತ್ ವಿ ಸಿ |
| ತಂದೆ/ಗಂಡನ ಹೆಸರು | : | ಚಂದ್ರಮೌಳಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಅಸಿಸ್ಟಂಟ್ ಡೈರೆಕ್ಟರ್ , ತಾಲ್ಲೂಕು ಪಂಚಾಯಿತಿ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಜುಲೈ-2015 ರಿಂದ 2020 ರ ವರೆಗೆ ಆಲೂರುಹಟ್ಟಿ ಶ್ರೀರಾಮನಗರದ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಪಿಡಿಓ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿ.16-05-2016 ರಂದು ದಾವಣಗೆರೆ ಗ್ರಾಮಾಂತರ ಪೊಲೀಸರು ಆಲೂರು ಹಟ್ಟಿ ಗ್ರಾಮದ ಶ್ರೀರಾಮನಗರದ ಆಸ್ತಿ ಸಂಖ್ಯೆ535/4-ಪಿ ಗೆ ಸಂಬಂಧಿಸಿದ ಉತಾರ ಕೇಳಿದ್ದರು. ಈ ಬಗ್ಗೆ ನಾನು ಕೇವಲ ದೃಢೀಕರಣ ಪತ್ರ ನೀಡಿದ್ದೇನೆ ನಮ್ಮ ಕಛೇರಿಯ ಅಥವಾ ಸರ್ಕಾರದ ನಿಯಮದ ಪ್ರಕಾರ ಇ-ಸ್ವತ್ತು ಬಂದಿರುವುದರಿಂದ ಉತಾರ ಕೊಡಲು ಅವಕಾಶ ಇರುವುದಿಲ್ಲ.

ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಪಿ.5 ಎಂದು , ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ಶ್ರೀ ಆರ್.ಕೆ ವಕೀಲರ ಪರವಾಗಿ ಶ್ರೀ ಬಿ.ಟಿ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಂಜಸ ಕಾರಣ ನೀಡದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**In the court of 1st Addl. District and Sessions Judge, Davanagere.**
**S.C.34/2023**

P.W. 05
C.W. 17
Duly sworn on 09-01-2027

| | | |
|---|---|---|
| Name Sri: Smt | :: | Dr.G.M. Mohan Kumar |
| Name of Father/ Husband | :: | G.S.Mahadevappa |
| Age | :: | 52 years |
| Designation | :: | Forensic expert, C G Hospital Davangere, |
| Residing at | | Davanagere. |

From July 2015 to till this date I have been working as a Forensic expert in District Hospital, Davanagere.

On 11.05.2016, ASI of Rural police station , Davangere Sri.K.N.Halappa has requested me to conduct postmortem examination of dead body of Manjainaika R. S/o Ramanaika, 29 years, R/o Aluruhatti village, Davanagere Taluk and District. Accordingly, on the same day I conducted postmortem examination of dead body at mortuary of our hospital in between 01.30 PM to 02.30 PM, who died with the alleged history of abatement for suicide (consumption of poison).

I mentioned clothes and articles on the body as well as our hospital casualty death intimation.

The dead body is that of a female aged about 29 years measuring 166 CM in length, moderately built and nourished, light dark complexioned, Eyes are closed, Pupils dilated and fixed. Cornea clear on both sides. Conjunctiva not congested. There is no discharge of frothy / mucold / bloody / serous material from mouth and both nostrils. Rigor mortis present all over the body. Purplish pink post -mortem staining present and fixed on

the back of the body.

Tattoo mark: marked with figure of female goddess over the outer aspect of left arm.

ON INTERNAL EXAMINATION

All the internal organs are intact and congested.

Stomach contains 20 ml of red coloured liquid material, Mucosa is eroded at places. Un-usaual smell present (OP. Compound).

I collected blood and visecra samples. Viscera are preserved in saturated solution of sodium chloride as preservative material, labelled, packed, sealed and sent to the Deputy Director RFSL, Davanagere through police Rural Police Station, Davanagere Taluk, Davanagere District along with sample seal for chemical analysis.

Time since death is more than 12 hours and less 24 hours duration.

Opinion as to the cause of death.

Reserved pending for RFSL report.

On 27-07-2016, I received requisition from PSI, Rural police station, Davanagere along with RFSL report to give final my opinion as to the cause of death.

Up on my examination of FSL report the final opinion as to the cause of death is due to respiratory failure consequent upon consumption of substance containing Organophosphorus insecticide.

Now I see the post mortem report, it is marked as Ex.P.2 and my signature is marked as Ex.P.2(a). Now I see my final opinion , it is marked as Ex.P.3 and my signature is marked as Ex.P.3(a). No I see the FSL report it is marked as Ex.P.4.

**Cross examination:** Sri RK advocate for accused persons.

Sri BT advocate for Sri RK advocate prays time. No grounds. Prayer

is rejected. Hence cross examination recorded as nil.

Re-examination:- Nil.

(Typed to my detection in Open Court)

R, O, I and A C,

1st Addl. District Judge,
Davanagere.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ‌ ದಾವಣಗೆರೆ.</u>

<u>S.C.34/2023</u>

PW- 04

CW- 12

ಪ್ರ. ಬೋ. ದಿನಾಂಕಃ 29-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಗಿರೀಶ್ ನಾಯ್ಕ |
| ತಂದೆ/ಗಂಡನ ಹೆಸರು | : | ಓಂಕಾನಾಯ್ಕ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಆಲೂರು ಹಟ್ಟಿ ಗ್ರಾಮ , ದಾವಣಗೆರೆ ತಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾ.ಸಾ-1 ರಾಮಾನಾಯ್ಕ , ಈ ಕೇಸಿನ ಇತರೆ ಸಾಕ್ಷಿದಾರರು ಮತ್ತು ಆರೋಪಿತರು ನನಗೆ ಗೊತ್ತು. ಚಾಸಾ-1 ರವರಿಗೆ ಮೂರು ಜನ ಮಕ್ಕಳು. ಅವರಿಗೆ ಒಬ್ಬ ಗಂಡು ಮಗ , ಎರಡು ಹೆಣ್ಣುಮಕ್ಕಳು. ಚಾಸಾ-1 ತೀರಿಕೊಂಡಿರುತ್ತಾರೆ. ಚಾಸಾ-1 ರವರ ಮಗನ ಹೆಸರು ಮಂಜಾನಾಯ್ಕ.

ಮಂಜಾನಾಯ್ಕ ವಿಷ ಸೇವಿಸಿ ತೀರಿಕೊಂಡಿದ್ದಾನೆ.. ಮೃತ ಮಂಜಾನಾಯ್ಕ 2 ನೇ ಆರೋಪಿಯಿಂದ ಸಾಲ ಪಡೆದಿದ್ದ. ಸಾಲ ಪಡೆದ ವಿಚಾರವಾಗಿ ಆರೋಪಿತರು ಚಾಸಾ-1 ರವರ ಮನೆಯ ಬಳಿ ಗಲಟೆ ಮಾಡಿದ್ದರು. ಈ ವಿಚಾರವಾಗಿ ಸಂಧಾನ ಮಾಡಿ , ಕೊಡುತ್ತಾರೆ ಬಿಡಿ ಎಂದು ಹೇಳಿದ್ದೆ.

ದಿ.10-05-2016 ರಂದು ಮಧ್ಯಾಹ್ನ 1-30 ರಿಂದ 2-00 ಗಂಟೆ ಸಮಯದಲ್ಲಿ ರಾಮಾನಾಯ್ಕನ ಮನೆ ಹತ್ತಿರ ಗಲಾಟೆಯಾಗುತ್ತಿತ್ತು. ಆರೋಪಿತರು ದುಡ್ಡು ಕೊಡು ಎಂದು ಮಂಜಾನಾಯ್ಕನಿಗೆ ಬೈಯುತ್ತಿದ್ದರು. ದುಡ್ಡು ಕೊಡು ಇಲ್ಲವಾದರೆ ಸಾಯಿ ಎಂದು ಬೈದಿರುತ್ತಾರೆ. ನಾನು ಗಲಾಟೆ ಬಿಡಿಸಿ , ಈ ಬಗ್ಗೆ ಸಂಧಾನ ಮಾಡಿದೇನೆ. ಆ ನಂತರ ಮಂಜಾನಾಯ್ಕ ಮನೆಯಿಂದ ಹೊರಗೆ ಹೋದ , ಆ ದಿನ ಆತ ಸಂಜೆ 4-00 ಕ್ಕೆ ವಿಷ ಸೇವನೆ

ಮಾಡಿ ಮನೆಗೆ ಬಂದು ಬಿದ್ದು ಒದ್ದಾಡುತ್ತಿದ್ದ. ನಂತರ ಆತನ ತಂದೆ ತಾಯಿ ಆಸ್ಪತ್ರೆಗೆ ಆತನನ್ನು ಕರೆದುಕೊಂಡು ಹೋಗಿರುತ್ತಾರೆ. ಆದರೆ ಆತ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾನೆ. ಆತನ ಸಾವಿಗೆ ಆರೋಪಿತರೇ ಕಾರಣರಾಗಿರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ಆಲೂರುಹಟ್ಟಿಯಲ್ಲಿ ನನ್ನ ಮನೆ ಬಸ್ ನಿಲ್ದಾಣದ ಪಕ್ಕ ಇದೆ ಎನ್ನುವುದು ಸರಿ. ಬಸ್ ನಿಲ್ದಾಣ ದಾವಣಗೆರೆ ಜಗಳೂರು ಮುಖ್ಯ ರಸ್ತೆಯಲ್ಲಿರುತ್ತದೆ ಎನ್ನುವುದು ಸರಿ. ನಮ್ಮ ಮನೆಯಿಂದ ದಕ್ಷಿಣದಿಕ್ಕಿನಲ್ಲಿ ಊರ ಒಳಗೆ ಹೋಗಿ ,ಪೂರ್ವಕ್ಕೆ ತಿರುಗಿದರೆ ಪಂಚಾಯಿತಿ ಕಛೇರಿ ಬರುತ್ತದೆ ಎನ್ನುವುದು ಸರಿ. ಪಂಚಾಯಿತಿ ಎದುರು 450 ಮೀಟರ್ ಹೋದರೆ ಮೃತನ ಮೆನೆ ಬರುತ್ತೆ ಎಂದರೆ ಸಾಕ್ಷಿ ಇಲ್ಲ 100 ಮೀಟರ್ ಅಂತರದಲ್ಲಿ ರಾಮಾನಾಯ್ಕನ ಮನೆ ಬರುತ್ತದೆ ಎಂದು ನುಡಿದಿರುತ್ತಾರೆ.

ಬೇರೆಯವರು ಗಲಾಟೆಯಾದ ಸ್ಥಳಕ್ಕೆ ಹೋಗುತ್ತಿದ್ದದ್ದರಿಂದ ನಾನೂ ಸಹ ಸ್ಥಳಕ್ಕೆ ಹೋಗಿರುತ್ತೇನೆ. ವಿನೋದ್ ಕುಮಾರ್ , ಓಂಕಾರ ನಾಯ್ಕು , ವೆಂಕಟೇಶ್ ನಾಯ್ಕು ಆ ರೀತಿ ಹೋಗುತ್ತಿದ್ದರು , ನಾನೂ ಸಹ ಹೋಗಿರುತ್ತೇನೆ. ನಮ್ಮ ಮನೆಯ ಉತ್ತರಕ್ಕೆ ವಿನೋದ್ ಕುಮಾರ್ ರವರ ಮನೆ ಇರುತ್ತದೆ. ಓಂಕಾರ್ ನಾಯ್ಕು ನ ಮನೆ ನಮ್ಮ ಮನೆಯಿಂದ ಪೂರ್ವಕ್ಕೆ ಬರುತ್ತದೆ.

ನಾನು ಸ್ಥಳಕ್ಕೆ ಹೋದಾಗ ಮಧ್ಯಾಹ್ನ 1-30 ಗಂಟೆಯಾಗಿತ್ತು. ಸುಮಾರು 15 ನಿಮಿಷಗಳ ಕಾಲ ಗಲಾಟೆಯಾಗಿರುತ್ತದೆ. ಗಲಾಟೆ ಸಮಯದಲ್ಲಿ ಮಂಜಾನಾಯ್ಕು ಮತ್ತು ಆತನ ತಾಯಿ ಅವರ ಮನೆಯಲ್ಲಿದ್ದರು. ವಿನೋದ್ ನಾಯ್ಕು , ವೆಂಕಟೇಶ್ ನಾಯ್ಕು ಮತ್ತು ನಾನು ಜೊತೆಯಲ್ಲಿ ಹೋಗಿದ್ದೇವೆ. ನಾವು ಹೋಗುವ ಮೊದಲು ಆ ಸ್ಥಳದಲ್ಲಿ ಜನ ಸೇರಿದ್ದರು. ಮೃತ ಮಂಜಾನಾಯ್ಕು ಆರೋಪಿತರ ಬಳಿ ಎಷ್ಟು ಸಾಲ ಯಾವಾಗ ಮಾಡಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಇಷ್ಟೇ ಸಾಲ ಕೊಡು ಎಂದು ಮಾತನಾಡಿದ್ದನ್ನು ನಾನು ಕೇಳಿಸಿಕೊಂಡಿಲ್ಲ. ನನಗೆ ಸಮನ್ಸ ಬಂದಿರುವುದರಿಂದ ನಾನು ಮೊದಲೇ ಬಂದಿದ್ದೆ. ಆ ನಂತರ ವೆಂಕಟೇಶ್ ನಾಯ್ಕು ಮತ್ತು ಭುಲ್ಯಾ ನಾಯ್ಕು ಬಂದಿದ್ದಾರೆ. ಚಾಸಾ-8 ರಮೇಶ್ ನಾಯ್ಕು ನಾನು ಬಂದ ಮೇಲೆ ಬಂದಿದ್ದಾರೆ.

ನಾನು ಬಂದಾಗ ಮಂಜಾನಾಯ್ಕು ಒದ್ದಾಡುತ್ತಿದ್ದ. ಮಂಜಾನಾಯ್ಕುನಿಗೆ ನಾನು ತಮ್ಮನಾಗುವುದಿಲ್ಲ. ಆತ ನನಗೆ ದೂರದ ಸಂಬಂಧಿಯಾಗಿರುತ್ತಾನೆ. ನಾನು ಮಂಜಾನಾಯ್ಕುನನ್ನು ಉಪಚರಿಸಲು ಪ್ರಯತ್ನ ಪಟ್ಟಿಲ್ಲ. ನಾನು ಆ ದಿನ ಆಸ್ಪತ್ರೆಗೆ ಹೋಗಿಲ್ಲ , ಮಾರನೇ ದಿನ ಹೋಗಿದ್ದೆ.

ಆರೋಪಿತರಿಗೂ ಮಂಜಾನಾಯ್ಕುನಿಗೂ ಯಾವುದೇ ಸಂಬಂಧವಿಲ್ಲ, ಆರೋಪಿತರು ಮಂಜಾನಾಯ್ಕುನಿಗೆ ಸಾಲ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಸಾಲ ಕೊಟ್ಟಿದ್ದನ್ನು ನಾನು ಖುದ್ದಾಗಿ ನೋಡಿಲ್ಲ.

2 ನೇ ಆರೋಪಿ ಆಲೂರುಹಟ್ಟಿಯಲ್ಲಿ ಒಂದು ಮನೆ ಖರೀದಿ ಮಾಡಿದ್ದ ಎನ್ನುವುದು ಸರಿ. ಆ ಮನೆ ಮೊದಲು ರಮೇಶ್ ನಾಯ್ಕುನ ಹೆಸರಿಗೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಂತರ ಆ ಮನೆಯನ್ನು ತನ್ನ ಹೆಸರಿಗೆ ಮಾಡಿಸಿಕೊಂಡ ಎನ್ನುವುದು ನನಗೆ ಗೊತ್ತಿಲ್ಲ. ಆ ಮನೆ ಶಿಥಿಲಗೊಂಡಿತ್ತು , 2 ನೇ ಆರೋಪಿ ಅದನ್ನು ರೀಪೇರಿ ಮಾಡಿಸಲು ದುಡ್ಡು ಶೇಖರಣೆ ಮಾಡಿದ್ದ ಎನ್ನುವುದು ನನಗೆ ಗೊತ್ತಿಲ್ಲ. ರಮೇಶ್ ನಾಯ್ಕು ನೌಕರಿಗಾಗಿ 2 ನೇ ಆರೋಪಿಯಿಂದ ಹಣವನ್ನು ಪಡೆದಿದ್ದ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಎಲ್ಲಾ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. 2 ನೇ ಆರೋಪಿ ರಮೇಶ್ ನಾಯ್ಕುನಿಗೆ ನಾನು ಕೊಟ್ಟ ದೂಡ್ಡು ಕೊಡು ಎಂದು ಕೇಳುತ್ತಿದ್ದ ಎಂದರೆ ಸಾಕ್ಷಿ - ಮಂಜಾನಾಯ್ಕುನಿಗೆ ಕೇಳುತ್ತಿದ್ದ ಎಂದು ನುಡಿದಿರುತ್ತಾರೆ.

ರಮೇಶ್ ನಾಯ್ಕು 2 ನೇ ಆರೋಪಿ ಸಾಲ ವಾಪಸ್ ಕೇಳುವುದನ್ನು ಆತನ ಬಾಯಿ ಮುಚ್ಚಿಸಬೇಕು ಎಂದು ಸುಳ್ಳು ಪ್ರಕರಣ ಸೃಷ್ಟಿಸಿದ್ದಾರೆ ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ಮೃತ ಮಂಜಾನಾಯ್ಕುನಿಗೆ ದುಡ್ಡು ಕೊಡು ಇಲ್ಲವಾದರೆ ಸಾಯಿ ಎಂದು ಹೇಳುತ್ತಿದ್ದರು ಎಂದು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ</u>:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.34/2023</u>

PW- 03

CW- 11

ಪ್ರ. ಬೋ. ದಿನಾಂಕಃ 28-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ವಿನೋದ್ ಕುಮಾರ್ |
| ತಂದೆ/ಗಂಡನ ಹೆಸರು | : | ಬಸವರಾಜ್ ನಾಯ್ಕ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಗುತ್ತಿಗೆದಾರ |
| ವಾಸ | : | ಆಲೂರು ಹಟ್ಟಿ ಗ್ರಾಮ , |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾ.ಸಾ-1 ರಾಮಾನಾಯ್ಕ , ಈ ಕೇಸಿನ ಇತರೆ ಸಾಕ್ಷಿದಾರರು ಮತ್ತು ಆರೋಪಿತರು ನನಗೆ ಗೊತ್ತು. ಚಾಸಾ-1 ರವರಿಗೆ ಮೂರು ಜನ ಮಕ್ಕಳು. ಅವರಿಗೆ ಒಬ್ಬ ಗಂಡು ಮಗ , ಎರಡು ಹೆಣ್ಣುಮಕ್ಕಳು. ಮೃತ ಮಂಜಾನಾಯ್ಕ ಚಾಸಾ-1 ರವರ ಮಗ.

ಮಂಜಾನಾಯ್ಕ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದ. ಆತ ಆರೋಪಿಗಳ ಜೊತೆ ಒಡನಾಟ ಇಟ್ಟುಕೊಂಡಿದ್ದ. ಅವರ ಮನೆಗೆ ಹೋಗಿ ಬರುವುದು ಮಾಡುತ್ತಿದ್ದ. ಮೃತ ಮಂಜಾನಾಯ್ಕ ಆರೋಪಿತರಿಂದ ಹಣ ಪಡೆದುಕೊಂಡಿದ್ದ ಮತ್ತು ಗಲಾಟೆಯಾಗಿತ್ತು ಎಂದು ವಿಚಾರ ಗೊತ್ತಾಯಿತು. ನಾನು ಆರೋಪಿಗಳಿಗೂ ಮತ್ತು ಮೃತ ಮಂಜಾನಾಯ್ಕನಿಗೂ ಗಲಾಟೆ ಮಾಡಿಕೊಳ್ಳಬೇಡಿ , ಬಗೆಹರಿಸೋಣ ಎಂದು ಹೇಳಿದ್ದೆ.

ದಿ.10-05-2016 ರಂದು ಬೆಳಿಗ್ಗೆ ಗಲಾಟೆಯಾಗಿತ್ತು, ಆಗ ಆರೋಪಿತರು ಅವಾಚ್ಯ ಶಬ್ದಗಳಿಂದ ಮಂಜಾನಾಯ್ಕನಿಗೆ ಬೈದಿದ್ದರು. ಆರೋಪಿತರು ನೀನು ಹಣ ಕೊಡಲು ಆಗದಿದ್ದರೆ ಸತ್ತುಹೋಗು ಎಂದು ಆತನಿಗೆಬೈದಿದ್ದರು. ಸುಮಾರು ಮಧ್ಯಾಹ್ನ 2-00 ಗಂಟೆಗೆ ಮಂಜಾನಾಯ್ಕ ವಿಷ ಕುಡಿದಿದ್ದಾನೆ ಎಂದು ಗೊತ್ತಾಯಿತು. ನನಗೆ ನನ್ನ ಸ್ನೇಹಿತರು ಫೋನ್ ಮಾಡಿ ತಿಳಿಸಿದರು , ಆಗ ವಿಚಾರ ಗೊತ್ತಾಗಿರುತ್ತದೆ. ವಿಚಾರ ಗೊತ್ತಾಗಿ ಆಸ್ಪತ್ರೆಗೆಹೋಗಿದ್ದ.

ಆದರೆ ಆತ ಅದೇ ದಿನ ರಾತ್ರಿ 11-00 ಗಂಟೆಗೆ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆ. ಆತನ ಹೆಣವನ್ನು ಸಿಜಿ ಆಸ್ಪತ್ರೆಯಲ್ಲಿ ನೋಡಿದ್ದೇನೆ. ಆತನ ಸಾವಿಗೆ ಆರೋಪಿತರೇ ಕಾರಣರಾಗಿರುತ್ತಾರೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ಚಾಸಾ-8 ರವರು ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎನ್ನುವುದು ಸರಿಯಲ್ಲ. ಮಂಜಾನಾಯ್ಕ ಆರೋಪಿತರಿಂದ ದುಡ್ಡು ಪಡೆದಿದ್ದನ್ನು ನಾನು ಖುದ್ದು ನೋಡಿಲ್ಲ. ಆತ ಸಾಯುವ ದಿನವೇ ಬೆಳಿಗ್ಗೆ 10-00 ಗಂಟೆಗೆ ಆರೋಪಿತರಿಂದ ಮಂಜಾನಾಯ್ಕ ದುಡ್ಡು ಪಡೆದ ವಿಚಾರ ಗೊತ್ತಾಗಿರುತ್ತದೆ. ಆ ದಿನ ಬೆಳಿಗ್ಗೆ 10-00 ಗಂಟೆಗೆ ಗಲಾಟೆಯಾಗುತ್ತಿತ್ತು. ಗಲಾಟೆಯಾದಾಗ ಬಹಳ ಜನ ಸೇರಿದ್ದರು. ಗಲಾಟೆಯಾದಾಗ ಮೃತ ಮಂಜಾನಾಯ್ಕನ ಮನೆಯ ಓಣಿಯಲ್ಲಿದ್ದ ಜನ ಮಾತ್ರ ಸೇರಿದ್ದರು. ಫಿರ್ಯಾದಿ ಸಂಬಂಧದಲ್ಲಿ ನನಗೆ ಮಾವನಾಗುವುದಿಲ್ಲ. ಬಗೆಹರಿಸೋಣ ಎನ್ನುವ ಸಮಯದಲ್ಲಿ ಓಂಕಾರ್ ನಾಯ್ಕ , ಗೀರಿಶ್ , ವೆಂಕಟೇಶ್ ಎನ್ನುವವರು ಮತ್ತು ಇತರರು ಸೇರಿದ್ದರು. ಬಗೆಹರಿಸೋಣ ಎಂದು ಹೇಳಿದಿರಲ್ಲ ಆ ಬಗ್ಗೆ ಪ್ರಯತ್ನ ಪಟ್ಟಿದ್ದೀರಾ ಎಂದರೆ ಸಾಕ್ಷಿ - ಇಲ್ಲಿಗೆ ನಿಲ್ಲಿಸಿ, ಬಗೆಹರಿಸೋಣ ಎಂದು ಹೇಳಿದ್ದೆ. ಆ ರೀತಿ ಹೇಳಿದಾಗ ಓಂಕಾರ ನಾಯ್ಕ ಇದ್ದರು. ಮಂಜಾನಾಯ್ಕನ ಮನೆಯಿಂದ ಸುಮಾರು 100-200 ಮೀಟರ್ ದೂರದಲ್ಲಿ ನನ್ನ ಮನೆ ಇದೆ. ಸುಮಾರು 40-50 ಮನೆಗಳ ಅಂತರದಲ್ಲಿ ನಮ್ಮ ಮನೆಗಳು ಇವೆ. ನಾನ ಆ ರೀತಿ ಬಗೆಹರಿಸೋಣ ಎಂದು ಹೇಳಿದ ಸಮಯದಲ್ಲಿ ಮಧ್ಯದಲ್ಲಿ ಬರುವ 40-50 ಮನೆಗಳ ಜನ ಇರಲಿಲ್ಲ ,ಪಕ್ಕದ ಮನೆಯವರು ಒಬ್ಬರು ಇದ್ದರು. ಮಂಜಾನಾಯ್ಕ ತನ್ನ ಮನೆಯಲ್ಲಿ ಬಿದ್ದದ್ದನ್ನು ನಾನು ನೋಡಿಲ್ಲ. ನಾನು ಮಂಜಾನಾಯ್ಕನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ಗಲಾಟೆ ಮಾಡುವ ಸಮಯದಲ್ಲಿ ಮೃತ ಮಂಜಾನಾಯ್ಕ ಆರೋಪಿತರಿಂದ ಹಣ ಪಡೆದ ವಿಚಾರ ನನಗೆ ಗೊತ್ತಾಗಿರುತ್ತದೆ. ನನಗೆ ಗಿರೀಶ್ ನಾಯ್ಕ ಫೋನ್ ಮಾಡಿ ತಿಳಿಸಿರುತ್ತಾರೆ. ಮಂಜಾನಾಯ್ಕ ಮನೆಯಿಂದ ಹೋದ ನಂತರ ಮತ್ತು ಆತ ಸಾಯುವ ಮೊದಲು ನೀವು ಆತನ ಜೊತೆ ಮಾತನಾಡಿಲ್ಲ ಎಂದರೆ ಸಾಕ್ಷಿ - ಮಾತನಾಡಿಲ್ಲ ಎಂದು ನುಡಿರುತ್ತಾರೆ. ಆರೋಪಿತರು ಮಂಜಾನಾಯ್ಕನಿಗೆ ಯಾವುದೇ ಹಣ ಕೊಟ್ಟಿಲ್ಲ ಮತ್ತು ಹಣ ವಾಸಪ್ ನೀಡುವಂತೆ ಕೇಳಿಲ್ಲ ಎನ್ನುವುದು ಸರಿಯಲ್ಲ. ಮಂಜಾನಾಯ್ಕ ಐಪಿಎಲ್

ಜೂಜಾಟ ಆಡುತ್ತಿದ್ದ , ಆತ ಮಧ್ಯಪಾನ ಯಾವಾಲಗೂ ಮಾಡುತ್ತಿದ್ದ ಎನ್ನುವುದು ಸರಿಯಲ್ಲ. ಆದರೆ ಆಗಾಗ ಮಧ್ಯಪಾನ ಮಾಡುತ್ತಿದ್ದ.

ಆರೋಪಿತರು ಮನೆ ಕಟ್ಟಲು ಇಟ್ಟುಕೊಂಡಿದ್ದ 11 ಲಕ್ಷ ಹಣವನ್ನು ರಮೇಶ್ ನಾಯ್ಕುನಿಗೆ ಕೊಟ್ಟಿದ್ದರು ಎಂದರೆ ಸಾಕಿ - ಅದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ರಮೇಶ್ ನಾಯ್ಕು ನೌಕರಿಗಾಗಿ ಆರೋಪಿತರಿಂದ ಹಣ ಪಡೆದಿದ್ದ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ರಮೇಶ್ ನಾಯ್ಕುನ ಮಾತು ಕೇಳಿ ಆರೋಪಿತರು ಮೃತ ಮಂಜಾನಾಯ್ಕುನಿಗೆ ಹಣ ಕೊಟ್ಟಿದ್ದರು , ಆತನಿಗೆ ಹಣಕ್ಕಾಗಿ ಹಿಂಸೆ ನೀಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಮೇಶ್ ನಾಯ್ಕು ಮತ್ತು ಮೃತ ಮಂಜಾನಾಯ್ಕುನಿಗೆ ಮಾವನಾಗಬೇಕು, ರಮೇಶ್ ನಾಯ್ಕು ನನಗೆ ಸಂಬಂಧಿ ಆಗಿರುವುದರಿಂದ ಆ ಸಂಬಂಧವಾಗಿ ನಾನು ಸುಳ್ಳು ಹೇಳುತ್ತಿದ್ದೇನ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ‍ ದಾವಣಗೆರೆ.

S.C.34/2023

PW- 02

CW- 08

ಪ್ರ. ಬೋ. ದಿನಾಂಕಃ 28-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ರಮೇಶ್ ನಾಯ್ಕ |
| ತಂದೆ/ಗಂಡನ ಹೆಸರು | : | ಹನುಮಂತ ನಾಯ್ಕ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಜಿಲ್ಲಾ ವ್ಯವಸ್ಥಾಪಕ, ಜಿಲ್ಲಾ ಪಂಚಾಯಿತಿ , ಚಿತ್ರದುರ್ಗ |
| ವಾಸ | : | ಚಿತ್ರದುರ್ಗ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾ.ಸಾ-1 ನನ್ನ ಮಾವ. ಅವರು ಕಳೆದ ವರ್ಷ ತೀರಿಕೊಂಡಿದ್ದಾರೆ. ಅವರಿಗೆ ಎರಡು ಹೆಣ್ಣುಮಕ್ಕಳು , ಒಂದು ಗಂಡು ಮಗು. ಮೃತ ಮಂಜಾನಾಯ್ಕ ನನಗೆ ಅಳಿಯನಾಗಬೇಕು. ಈ ಕೇಸಿನ ಇತರೆ ಸಾಕ್ಷಿದಾರರು ಮತ್ತು ಆರೋಪಿತರು ನನಗೆ ಗೊತ್ತು.

ಸದರಿ ಮಂಜಾನಾಯ್ಕ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದ. ಆತ ಯಾವಾಗಲೂ 1 ನೇ ಆರೋಪಿಯ ಮನೆಗೆ ಹೋಗುತ್ತಿದ್ದ. ಆತನಿಗೆ 2 ನೇ ಆರೋಪಿಯ ಜೊತೆ ಹಣಕಾಸಿನ ವ್ಯವಹಾರ ಇತ್ತು. ಸುಮಾರು ಬಾರಿ ಹಣದ ವಿಚಾರವಾಗಿ ಅವರಲ್ಲಿ ಜಗಳ ಆಗಿರುತ್ತದೆ. ನಾನು ಸಂಧಾನ ಮಾಡಿದ್ದೇನೆ. ದುಡ್ಡುನ್ನು ಕೊಡಿಸುತ್ತೇನೆ, ಜಗಳ ಮಾಡಬೇಡಿ ಎಂದು ಆರೋಪಿತರಿಗೆ ಹೇಳಿದ್ದೆ. ಮೃತ ಮಂಜಾನಾಯ್ಕ ದುಡ್ಡು ಕೊಡು ಎಂದು ಆರೋಪಿತರು ಬಹಳ ಹಿಂಸೆ ಕೊಡುತ್ತಿದ್ದಾರೆ , ಎಲ್ಲಿಯಾದರು ಹೋಗಿ ಸಾಯಿ ಎಂದು ಹೇಳುತ್ತಿದ್ದಾರೆ ಎಂದು ನನ್ನ ಮುಂದೆ ಹೇಳುತ್ತಿದ್ದ.

2016 ರಲ್ಲಿ ಮಧ್ಯಾಹ್ನ ಸುಮಾರು 2-00 ಗಂಟೆಸುಮಾರು ನನ್ನ ಮಾವನ ಮನೆಯ ಬಳಿ ಜಗಳ ಮತ್ತು ಗಲಾಟೆಯಾಗುತ್ತಿತ್ತು. ದುಡ್ಡು ಕೊಡು , ದುಡ್ಡು ಕೊಡು ,ಇಲ್ಲವಾದರೆ

ಸತ್ತುಹೋಗು ಎಂದು ಆರೋಪಿತರು ಮೃತ ಮಂಜಾನಾಯ್ಕುನಿಗೆ ಹೇಳಿದರು. ನಾನು ಆರೋಪಿಗಳಿಗೆ ಸಮಾಧಾನ ಮಾಡಿ ಕಳುಹಿಸಿದ್ದೇನೆ. ಆ ರೀತಿ ಗಲಾಟೆಯಾದ ನಂತರ ಮಂಜಾನಾಯ್ಕು ಮನೆಯಿಂದ ಹೊಗಿದ್ದ. ಸುಮಾರು 4-00 ಗಂಟೆಗೆ ಮನೆಗೆ ಬಂದು ಒದ್ದಾಡುತ್ತಿದ್ದ. ನಾವೆಲ್ಲ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಆದರೆ ರಾತ್ರಿ 11-00 ಗಂಟೆಗೆ ಆತ ಮೃತಪಟ್ಟ.

ಸಾಲ ಕೊಡುತ್ತಿದ್ದ ವಿಚಾರವಾಗಿ ಆರೋಪಿತರು ಆತನಿಗೆ ಸತಾಯಿಸಿ , ಸಾಯಿ ಸಾಯಿ ಎಂದು ಹೇಳುತ್ತಿದ್ದದ್ದರಿಂದ , ಹಣ ಕೊಡು ಇಲ್ಲವಾದರೆ ಸಾಯಿ ಎಂದು ಸತಾಯಿಸುತ್ತಿದ್ದದ್ದರಿಂದ ಆತ ವಿಷ ಕುಡಿದು ಮೃತಪಟ್ಟಿರುತ್ತಾನೆ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ದೂರನ್ನು ನನ್ನ ಮಾವ ಹೇಳಿದ ರೀತಿ ಬರೆದಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.1 ರಲ್ಲಿ ತನ್ನ ಮಾವನ ಸಹಿ ನೋಡಿ ಗುರುತಿಸಿರುತ್ತಾರೆ, ಆ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಆರೋಪಿತರಪರ ಶ್ರೀ ಆರ್ ಕೆ ವಕೀಲರ ಪರವಾಗಿ ಶ್ರೀಮತಿ ಹೆಚ್ ಎಂ ಎಸ್ ವಕೀಲರಿಂದ.

ನಾನು ಎಂ ಎಸ್ ಡಬ್ಲೂ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 2 ನೇ ಆರೋಪಿ ನನಗೆ ಸಂಬಂಧಿಕನಾಗುವುದಿಲ್ಲ. ನನ್ನ ಮಾವ ರಾಮಾ ನಾಯ್ಕುನಿಗೆ ಓದು-ಬರಹ ಬರುವುದಿಲ್ಲ. ನಾನು ದೂರನ್ನು ಠಾಣೆಯಿಲ್ಲಿ ಕುಳಿತು ಬರೆದಿದ್ದೇನೆ. ನಾನು ದೂರು ಬರೆದು ಕೊಟ್ಟ ಕೂಡಲೇ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

ಮೃತ ಮಂಜಾನಾಯ್ಕು 24 ಗಂಟೆ ಮಧ್ಯಪಾನ ಮಾಡುತ್ತಿದ್ದ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಮಧ್ಯಪಾನ ಮಾಡುತ್ತಿದ್ದ , ಆದರೆ 24 ಗಂಟೆ ಮಾಡುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಆತ ಮಧ್ಯಪಾನ ಮಾಡಿದಾಗ ಆತನಿಗೆ ಮನುಷ್ಯತ್ವ ಇರುತ್ತಿರಲಿಲ್ಲ , ಆತನ ತಂದೆ ತಾಯಿ ಯಾವಾಗಲೂ ಬೈಯುತ್ತಿದ್ದರು ಎಂದರೆ ಸಾಕ್ಷಿ ಆ ರೀತಿ ಹೇಳುವುದು ಸರಿಯಲ್ಲ ಎಂದು ನುಡಿದಿದ್ದಾರೆ.

ಆತ ಪ್ರತಿ ದಿನ ಮದ್ಯಪಾನ ಮಾಡುತ್ತಿದ್ದ ಎಂದು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿ.

ನಾನು, ನನ್ನ ಹೆಂಡತಿ, ಮಾವ , ಮತ್ತು ಇತರರು ಮಂಜಾನಾಯ್ಕನಿಗೆ ಬುದ್ದಿವಾದ ಹೇಳಿದ್ದೇವೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿ. ನಾನು ನನ್ನ ಅಳಿಯನ ಪರವಾಗಿ ಹಣಕಾಸಿನ ವಿಚಾರವಾಗಿ ಜಗಳ ಮಾಡಿಕೊಳ್ಳುತ್ತಿದ್ದಾರೆ ಎಂದು ಪೊಲೀಸರಿಗೆ ಫಿರ್ಯಾದಿ ಕೊಟ್ಟಿಲ್ಲ.

ನಾವು ಮನೆಯಲ್ಲಿ ಗಲಾಟೆ ಮಾಡಿಕೊಳ್ಳಬೇಡಿ, ಅದು ಏನು ಕೊಡುವುದು ಇದೆ ಕೊಟ್ಟುಬಿಡೋಣ ಎಂದು ಮಾತಿನಾಡಿಕೊಂಡಿದ್ದೇವು. ಮೃತ ಮಂಜಾನಾಯ್ಕನಿಗೆ ಆರೋಪಿತರು ದುಡ್ಡಿಗಾಗಿ ಹಿಂಸೆ ಕೊಡುತ್ತಿದ್ದಾರೆ ಎಂದು ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. ನಮ್ಮ ಮನೆ ಮಂಜಾನಾಯ್ಕನ ಮನೆಯಿಂದ ಸುಮಾರು 100-150 ಮೀಟರ್ ದೂರದಲ್ಲಿರುತ್ತದೆ. ಮಧ್ಯಾಹ್ನ 2-00 ಗಂಟೆಗೆ ಮಂಜಾನಾಯ್ಕ ಮನೆಯಿಂದ ಹೋದಾಗ ನಾನು ಮಂಜಾನಾಯ್ಕನ ಮನೆಯಲ್ಲಿದ್ದೆ . ಸಾಕ್ಷಿ ಮುಂದುವರೆದು ಆಗ ಆದ ಜಗಳವನ್ನು ನಾವೆ ಬಿಡಿಸಿದ್ದೇವೆ ಎಂದು ನುಡಿದಿದ್ದಾರೆ. ಆತ ಮನೆಯಿಂದ ಹೊರಗೆ ಹೋಗುವ ಮೊದಲು ಆತನ ಮನೆ ಮುಂದೆ ಗಲಾಟೆಯಾಗಿತ್ತು. ನಾನು ಪೊಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ 2-00 ಗಂಟೆ ಮೊದಲು ಮಂಜಾನಾಯ್ಕ ಮನೆ ಮುಂದು ಗಲಾಟೆಯಾಗಿತ್ತು ಎಂದು ಹೇಳಿದ್ದೇನೆ.

ಮೃತ ಮಂಜಾನಾಯ್ಕ 4-00 ಗಂಟೆಗೆ ಮನೆಯಲ್ಲಿ ಬಿದ್ದ ವಿಚಾರ ನನ್ನ ಗಮನಕ್ಕೆ ಇರುವುದಿಲ್ಲ. ಸದರಿ ವಿಚಾರವನ್ನು ಫಿರ್ಯಾದಿ ಹೇಳಿದ ರೀತಿ ಬರೆದಿದ್ದೇನೆ. ಫಿರ್ಯಾದಿ ಮತ್ತು ಫಿರ್ಯಾದಿಯ ಹೆಂಡತಿ ಮಂಜಾನಾಯ್ಕನನ್ನು ಉಪಚರಿಸಿದ್ದಾರೆ ಎಂದು ದೂರಿನಲ್ಲಿ ದೂರುದಾರರು ಹೇಳಿದಂತೆ ಬರೆದಿದ್ದೇನೆ. ನಾನು ನನ್ನ ಹೇಳಿಕೆಯಲ್ಲಿ ನನ್ನ ಮಾವ ಮತ್ತು ಮಾವನ ಹೆಂಡತಿ ಮಂಜಾನಾಯ್ಕನನ್ನು ಉಪಚರಿಸಿದ್ದಾರೆ ಎಂದು ಪೊಲೀಸರ ಮುಂದೆ ಹೇಳಿದ್ದೇನೆ. 4-00 ಗಂಟೆಗೆ ಮೃತ ಮಂಜಾನಾಯ್ಕ ಮನೆಗೆ ಬಂದು ಬಿದ್ದದ್ದನ್ನು ನಾನು ಕಣ್ಣಾರೆ ನೋಡಿಲ್ಲ. ಆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಯಾರೋ ಬಂದು ಗಲಾಟೆಯಾಗುತ್ತಿದೆ ಎಂದು ಹೇಳಿದರು ನಾನು ಕೂಡಲೇ ಹೋಗಿದ್ದೇನೆ. ಮಂಜಾನಾಯ್ಕ ಆ ರೀತಿ ಬಿದ್ದಾಗ ಆತನ ದೇಹದ ಮೇಲೆ ಯಾವುದೇ ಗಾಯಗಳಾಗಿರಲಿಲ್ಲ , ಆದರೆ ಆತ ಒದ್ದಾಡಿದ್ದರಿಂದ ಆತನಿಗೆ ತರಚಿದ ಗಾಯಗಳಾಗಿದ್ದವು. ದೂರನ್ನು ಬರೆಯುವ

ಸಮಯದಲ್ಲಿ ಯಾವುದೇ ಪೊಲೀಸರು ನನಗೆ ಸಹಾಯ ಮಾಡಿಲ್ಲ. ದೂರು ಬರೆಯುವಾಗ ಇದ್ದಂತಹ ಪೊಲೀಸರ ಹೆಸರು ಗೊತ್ತಿಲ್ಲ. ದೂರನ್ನು ಪೊಲೀಸರಿಗೆ ನನ್ನ ಮಾವ ಕೊಡುವಾಗ ನಾನು ಸಹ ಇದ್ದೆ.

ದೂರಿನಲ್ಲಿ ಫಿರ್ಯಾದಿ ಹೇಳಿದಂತೆ "ಪ್ರೇರಣೆ" ಮತ್ತು "ಪ್ರಚೋದನೆ" ಎಂದು ಬರೆದಿದ್ದೇನೆ. ನಾನು ಕಳೆದ ಮೂರು ವರ್ಷಗಳಿಂದ ಚಿತ್ರದುರ್ಗದ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ಆರೋಪಿತರು ಮೂಲತಃ ದಾವಣಗೆರೆ ಸಿಟಿ ವಾಸಿಗಳು ಎನ್ನುವುದು ಸರಿ. ಈಗ ಹತ್ತು ಹನ್ನೆರಡು ವರ್ಷಗಳಿಂದ ಆರೋಪಿತರು ಆಲೂರುಹಟ್ಟಿ ಗ್ರಾಮದಲ್ಲಿ ಮನೆ ಖರೀದಿಸಿ ವಾಸ ಮಾಡುತ್ತಿದ್ದಾರೆ ಎನ್ನುವುದು ಸರಿ. ನಾನು ಸಹ ಆರೋಪಿಗಳ ಮನೆಗೆ ಹೋಗುತ್ತಿದ್ದೆ ಎನ್ನುವುದು ಸರಿ. ಆ ಮನೆಯನ್ನು ನನ್ನ ಹೆಸರಿಗೆ ಖರೀದಿ ಮಾಡಲಾಗಿತ್ತು, ಆ ನಂತರ ಸದರಿ ಮನೆಯನ್ನು 1 ನೇ ಆರೋಪಿಯ ಹೆಸರಿಗೆ ವರ್ಗಾಯಿಸಲಾಯಿತು ಎನ್ನುವುದು ಸರಿ. ಆ ಮನೆ ಬರುತ್ತಾ ಬರುತ್ತಾ ಶಿಥಿಲಗೊಂಡಿತ್ತು ಎಂದರೆ ಸಾಕ್ಷಿ - ಇರಬಹುದು ಎಂದು ನುಡಿದಿರುತ್ತಾರೆ. ಆ ಶಿಥಿಲ ಮನೆಯನ್ನು ದುರಸ್ಥಿ ಮಾಡಿಸಲು 2 ನೇ ಆರೋಪಿ ಹಣ ಶೇಖರಿಸಿದ್ದ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ನೇ ಆರೋಪಿ ಮತ್ತು ನನ್ನ ಅತ್ತೆ ರೈಸ್ ಮಿಲ್ ನಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು ಸರಿ. 2 ನೇ ಆರೋಪಿ ದಲ್ಲಾಳಿ ಮಂಡಿಯಲ್ಲಿ ಹಮಾಲಿ ಮಾಡುತ್ತಾನೆ ಎನ್ನುವುದು ಸರಿ. ಆರೋಪಿಳಿಬ್ಬರು ಸುಮಾರು ಹನ್ನೊಂದು ಲಕ್ಷ ಹಣ ಹೊಂದಿಸಿದ್ದರು , ನೀವು ಅವರ ಜೊತೆ ಸಂಬಂಧಬೆಳೆಸಿ , ನೀವು ನಿಮ್ಮ ನೌಕರಿ ಸಂಬಂಧ ಹಣವನ್ನು ಸಾಲವಾಗಿ ಆರೋಪಿಗಳಿಂದ ಪಡೆದಿದ್ದೀರಿ ಎಂದರೆ ಸಾಕ್ಷಿ - ಶುದ್ಧಸುಳ್ಳು ಎಂದು ನುಡಿದಿದ್ದಾರೆ. ಆ ದುಡ್ಡನ್ನು ನಿಮಗೆ ಪದೇ ಪದೇ ಕೇಳುತ್ತಿದ್ದರು ಎಂದರೆ ಸಾಕ್ಷಿ - ನನ್ನನ್ನು ಒಂದು ಬಾರಿಯೂ ಕೇಳಿಲ್ಲ ಎಂದು ನುಡಿದಿದ್ದಾರೆ. ಸಾಕ್ಷಿ ಮುಂದುವರೆದು ಮಂಜಾನಾಯ್ಕನಿಗೆ ಕೊಟ್ಟಿರುವ ಹಣದ ವಿಚಾರವಾಗಿ ನಾನೇ ಸಂಧಾನ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಆರೋಪಿತರು ಮಂಜಾನಾಯ್ಕನಿಗೆ ಯಾವುದೇ ಸಾಲ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

ಪೊಲೀಸರಿಗೆ ಜಗಳ ಮಾಡುತ್ತಿದ್ದರು , ನಾನೇ ಸಂಧಾನ ಮಾಡಿದ್ದೇನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ದೂರು ಕೊಟ್ಟ ಮಾರನೇ ದಿನ ಪೊಲೀಸರು ಸಿಜಿ ಆಸ್ಪತ್ರೆಯಲ್ಲಿ ಹೆಣದ ಪೂಸ್ಟ ಮಾರ್ಟಮ್ ಮಾಡುವ ಸಮುದಲ್ಲಿ ನನ್ನ ಹೇಳಿಕೆ ಪಡೆದಿದ್ದಾರೆ.

ಬರೆದುಕೊಂಡ ಪೊಲೀಸರ ಹೆಸರು ಗೊತ್ತಿಲ್ಲ. ಪೊಲೀಸ್ ಮುಖ್ಯ ಪೇದೆ ನನ್ನ ಹೇಳಿಕೆ ಬರೆದಿದ್ದಾರೆ.

ನಾನು ದೂರನ್ನು ಪೊಲೀಸರು ಹೇಳಿದಂತೆ ಬರೆದಿದ್ದೇನೆ ಎನ್ನುವುದು ಸರಿಯಲ್ಲ. ನೀವು ಆರೋಪಿತರು ನಿಮಗೆ ಕೊಟ್ಟಿದ್ದಂತಹ ಸಾಲವನ್ನು ಕೇಳಿದ್ದರಿಂದ ಅವರ ಬಾಯಿ ಮುಚ್ಚಿಸಲು ಈ ದೂರು ಸೃಷ್ಟಿ ಮಾಡಿದ್ದೀರಾ ಎಂದರೆ ಸಾಕ್ಷಿ - ಆ ರೀತಿ ನುಡಿಯುವುದು ಸರಿಯಲ್ಲ ಎಂದು ನುಡಿದಿದ್ದಾರೆ. ಆರೋಪಿತರು ಮಂಜಾನಾಯ್ಕನಿಗೆ ದುಡ್ಡಿಗಾಗಿ ಹಿಂಸೆ ಕೊಡುತ್ತಿದ್ದರು , ಸಾಯಿ ಎಂದು ಹೇಳುತ್ತಿದ್ದರು ಎಂದು ಈ ಕೇಸಿಗಾಗಿ ಸೃಷ್ಟಿ ಮಾಡಿದ್ದೀರಾ ಎಂದರೆ ಸಾಕ್ಷಿ - ಆ ರೀತಿ ನುಡಿಯುವುದು ಸರಿಯಲ್ಲ ಎಂದು ನುಡಿದಿದ್ದಾರೆ.

ಮಂಜಾನಾಯ್ಕ ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದ. ಮಂಜಾನಾಯ್ಕ ಐಪಿಎಲ್ ಜೂಜಾಟ ಆಡುತ್ತಿದ್ದ ಎಂದರೆ ಸಾಕ್ಷಿ - ಅದು ನನಗೆ ಗೊತ್ತಿರುವ ರೀತಿ ಗೊತ್ತಿಲ್ಲ ಎಂದು ನುಡಿದಿದ್ದಾರೆ. ನನ್ನ ಮಾವ ಹೇಳಿದ ರೀತಿ ದೂರನ್ನು ಬರೆದಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.34/2023

PW- 01

CW- 09

ಪ್ರ. ಬೋ. ದಿನಾಂಕಃ 30-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಲಕ್ಷ್ಮೀಬಾಯಿ |
| ತಂದೆ/ಗಂಡನ ಹೆಸರು | : | ರಾಮಾನಾಯ್ಕ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಆಲೂರುಹಟ್ಟಿ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಮೂರು ಜನ ಮಕ್ಕಳು ಅವರಲ್ಲಿ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಗಂಡು ಮಗ. ಮೃತ ಮಂಜಾನಾಯ್ಕ ನನ್ನ ಮಗ. ಚಾಸಾ-1 ರಾಮಾನಾಯ್ಕ ನನ್ನ ಗಂಡ. ಅವರು ಇಲ್ಲಿಗೆ ಎಂಟು ತಿಂಗಳ ಹಿಂದೆ ಮೃತಪಟ್ಟಿದ್ದಾರೆ. ಚಾಸಾ-10 ರಿಂದ 14 ನನಗೆ ಗೊತ್ತು. ಆರೋಪಿಗಳು ನನಗೆ ಗೊತ್ತು.

ನನ್ನ ಮಗ ಮಂಜಾ ನಾಯ್ಕ ಆರೋಪಿತರಬಳಿ ಸಾಲ ಪಡೆದಿದ್ದ. ಸದರಿ ನನ್ನ ಮಗ ನಾನು ಸ್ವಲ್ಪ ಆರೋಪಿತರ ಬಳಿ ಸಾಲ ಪಡೆದಿದ್ದೇನೆ ಎಂದು ಹೇಳಿದ್ದ. ಆ ನಂತರ ಆರೋಪಿಗಳಿಗೆ ಸಾಲ ಮರಳಿಕೊಡುತ್ತೇವೆ ಎಂದು ಹೇಳಿದ್ದೇವು. ಆರೋಪಿಗಳು ನಮಗೆ ಸಾಲ ವಾಪಸ್ ಬೇಕು ಎಂದು ನನ್ನ ಮಗನಿಗೆ ಬಹಳ ಕಿರುಕುಳ ಕೊಡುತ್ತಿದ್ದರು. ನನ್ನ ಮಗ ನೀನು ಇವತ್ತು ಸಂಜೆ ಒಳಗೆ ಸಾಲ ಮರಳಿಕೊಡದಿದ್ದರೆ ನೀನು ಬದುಕಿದ್ದರು ವೇಸ್ಟು ಎಂದು ಹೇಳುತ್ತಾರೆ ಎಂದು ನನ್ನ ಮುಂದೆ ಹೇಳಿದ್ದ. ಸಾಲ ಕೊಟ್ಟಿರುವುದು ವಾಪಸ್ ಬೇಕೆ ಬೇಕು ಎಂದು ಬಹಳ ಸತಾಯಿಸುತ್ತಿದ್ದಾರೆ ಎಂದು ಹೇಳಿದ್ದ. ನೀನು ಸಾಲ ಕೊಡದಿದ್ದರೆ ವಿಷ ತಕೋ ಏನಾದರೂ ಮಾಡಿಕೋ ನಮಗೆ ಸಾಲ ವಾಪಸ್ ಬೇಕು ಎಂದು ಸಹ ನನಗೆ ಹೇಧ್ದರು ಎಂದು ನನ್ನ ಮುಂದೆ ಹೇಳಿದ್ದ. ಈ ಬಗ್ಗೆ ಆರೋಪಿಗಳಿಗೆ ನಾನು ಸಾಲ ವಾಪಸ್ ಕೊಡುತ್ತೇನೆ , ನನ್ನ ಮಗನಿಗೆ ಸತಾಯಿಸಬೇಡಿ ಎಂದು ಎರಡುಮೂರು ಸಾರಿ ಹೇಳಿದ್ದೆ.

ಇಲ್ಲಿಗೆ ಸುಮಾರು ಏಳು ವರ್ಷಗಳ ಹಿಂದೆ ಸಂಜೆ 4-00 ಗಂಟೆಗೆ ನನ್ನ ಮಗ ಮನೆಗೆ ಬಂದು , ಒದ್ದಾಡುತ್ತಿದ್ದ. ಆಗ ಆತನಿಂದ ವಿಷ ತೆಗೆದುಕೊಂಡಿರುವ ವಾಸನೆ ಬರುತ್ತಿತ್ತು. ಕೂಡಲೇ ನಾನು, ನನ್ನ ಮಗಳು ಮತ್ತು ಅಳಿಯ ನನ್ನ ಮಗನನ್ನು ದಾವಣಗೆರೆಯ ಸಿಜಿ ಆಸ್ಪತ್ರೆಗೆ ಸೇರಿಸಿರುತ್ತೇವೆ. ಆದರೆ ಅದೇ ದಿನ ರಾತ್ರಿ 11-00 ಗಂಟೆಗೆ ನನ್ನ ಮಗ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ.

ನನ್ನ ಮಗನ ಸಾವಿಗೆ ಆರೋಪಿತರೇ ಕಾರಣರಾಗಿರುತ್ತಾರೆ. ಆರೋಪಿಗಳಿಂದ ಪಡೆದಿದ್ದ ಸಾಲವನ್ನು ವಾಪಸ್ ಕೊಡದೇಯಿದ್ದ ಕಾರಣದಿಂದ ಹಾಗೂ ಆತನಿಗೆ ಆರೋಪಿಗಳು ಹಣ ವಾಪಸ್ ಕೊಡುವ ವಿಚಾರದಲ್ಲಿ ತೊಂದರೆ ಕೊಟ್ಟಿದ್ದರಿಂದ ಆತ ವಿಷ ತೆಗೆದುಕೊಂಡು ಮೃತಪಟ್ಟಿರುತ್ತಾನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-

ದಿ.10-05-2016 ರಂದು ಆರೋಪಿತರು ನಮ್ಮ ಮನೆಯ ಬಳಿ ಬಂದು, ಲೇ ಮಂಜಾನಾಯ್ಕ ನಾವು ಕೊಟ್ಟ ಹಣ ಕೊಡು , ಇಲ್ಲ ಅಂದರೆ ನೀನು ಭೂಮಿ ಮೇಲೆ ಬದುಕಿರಬೇಡ , ಸಾಯಿ ಎಂದು ಇಬ್ಬರು ಬೈದಿದ್ದಾರೆ, ಅದೇ ರೀತಿ ಅನೇಕ ಬಾರಿ ಆತನಿಗೆ ಸಾಯಿ ಎಂದು ಪ್ರಚೋದನೆ ಮಾಡಿದ್ದರಿಂದ ಆತ ವಿಷ ಕುಡಿದು ಮೃತಪಟ್ಟಿದ್ದಾನೆ ಎನ್ನುವುದು ಸರಿ.

<u>ಪಾಟೀಸವಾಲುಃ-</u> ಆರೋಪಿತರಪರ ಶ್ರೀ ಆರ್ ಕೆ ವಕೀಲರ ಪರವಾಗಿ ಶ್ರೀಮತಿ ಹೆಚ್ ಎಂ ಎಸ್ ವಕೀಲರಿಂದ.

ವಕೀಲರು ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು ಸಮಂಜಸ ಕಾರಣವಿಲ್ಲವೆಂದು ಮನವಿಯನ್ನು ತಳ್ಳಿಹಾಕಿ, ಪಾಟೀಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.